Vehicles held by the M. S. R. T C.

*Q.—160. Sri S. M. GURADDI (Muddebihal) [on behalf Sri J. L. Kabadi (Baradol)].

Will the Government be pleased to state :—

(*a*) the total numbes of vehicles held by the Mysore State Road Transport Corporation as on 1st October 1964 ;

(*b*) the number of vehicles required for meeting the daily requirements ;

(*c*) whether it is a fact that the Mysore State Road Transport Corporation has selected a dealer from Mangalore for supply of 200 T. M. B. Chassis without calling for tenders ;

(*d*) if so, why this particular firm was selected for supply of such bulk quantity ?

A.—Sri D. DEVARAJ URS (Minister for Labour, Housing and Transport).—

(*a*) 1976.

(*b*) 1562.

(*c*) Yes. The question of calling for tenders does not arise, because the purchases were made at the ratrs fixed by the D.G.S.&.D., Government of India.

(*d*) It is the policy of the Mysore State Road Transport Corporation to patronize all recognised dealers in the State.

ಶ್ರೀ ಎಸ್. ಎಂ. ಗುರಡ್ಡಿ.—1976 ಬಸ್ಸುಗಳ ಪೈಕಿ ಎಷ್ಟು ಬಸ್ಸುಗಳು ನಿರುಪಯೋಗಿಯಾಗಿವೆ ಸ್ವಾಮಿ ?

†ಶ್ರೀ ಡಿ. ದೇವರಾಜ ಅರಸ್.—ಆ ಮಾಹಿತಿ ನನ್ನ ಹತ್ತಿರ ಇಲ್ಲ ಸ್ವಾಮಿ.

ಶ್ರೀ ಎಸ್. ಎಂ. ಗುರಡ್ಡಿ.—ಉತ್ತರದಲ್ಲಿ ಕೊಟ್ಟಿರುವಂತೆ 1562 ಬಸ್ಸುಗಳು ರಸ್ತೆಯ ಮೇಲೆ ಇವೆ. ಉಳಿದ 400 ಬಸ್ಸುಗಳು ಕೆಟ್ಟವೆಯೇ ಅಥವಾ ಯಾವ ಸ್ಥಿತಿಯಲ್ಲಿವೆ ?

ಶ್ರೀ ಡಿ. ದೇವರಾಜ ಅರಸ್.—ನಮ್ಮಲ್ಲಿ ಇರತಕ್ಕದ್ದು ಒಟ್ಟು 1976 ಬಸ್ಸುಗಳು. ಅದರ ಪೈಕಿ 1693 ಬಸ್ಸುಗಳು ಓಡುತ್ತಿವೆ. ಈ ಬಗ್ಗೆ ಪ್ರಶ್ನೆಗೆ ಕೊಟ್ಟಿರುವ ಉತ್ತರದಲ್ಲಿ ಸರಿಮಾಡಿಕೊಳ್ಳಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ. ಈ ಬಸ್ಸುಗಳ ಪೈಕಿ ಬೆಂಗಳೂರಿನಲ್ಲಿ 216 ವಾಹನಗಳೂ, ಗುಲ್ಬರ್ಗದಲ್ಲಿ 144, ಬಿಜಾಪುರದಲ್ಲಿ 207, ಬೆಳಗಾಂನಲ್ಲಿ 250, ಹುಬ್ಬಳ್ಳಿಯಲ್ಲಿ 286, ಹಾಸನದಲ್ಲಿ 147, ಮೈಸೂರಿನಲ್ಲಿ 146, ಬೆಂಗಳೂರು ನಗರದಲ್ಲಿ 292 ವಾಹನಗಳು ಈ ಪ್ರಕಾರ ಇವೆ. ಪ್ರತಿಯೊಂದು ಡಿವಿಜನ್ನಲ್ಲಿ ಒಂದು ಲೆಕ್ಕಾಚಾರದ ಪ್ರಕಾರ ನೂರಕ್ಕೆ 20ರಂತೆ ಹೆಚ್ಚು ವಾಹನಗಳನ್ನಿಟ್ಟಿದ್ದೇವೆ. ಆ ಕಾರಣದಿಂದ 1976 ಬಸ್ಸುಗಳಿವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—1976 ಬಸ್ಸುಗಳಲ್ಲಿ ಎಷ್ಟು ಬಸ್ಸುಗಳು ದುರಂತಕ್ಕೆ ಈಡಾಗಿ ನಿರುಪಯೋಗವಾಗಿವೆ, ಎಷ್ಟು ಬಸ್ಸುಗಳನ್ನು ಸ್ಕ್ರಾಪ್ ಮಾಡಿದ್ದೀರಿ ?

ಶ್ರೀ ಡಿ. ದೇವರಾಜ ಅರಸ್.—ಅದಕ್ಕೆ ಬೇರೆ ಪ್ರಶ್ನೆಯನ್ನು ಕೇಳಿದರೆ ಹೇಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—1976 ಬಸ್ಸುಗಳಲ್ಲಿ 8 ವರ್ಷದ ಜೀವಾವಧಿ ಆದ ಅಥವಾ ಎರಡು ಲಕ್ಷ ಮೈಲೇಜ್ ಹತ್ತಿರ ಹತ್ತಿರ ಓಡಿರತಕ್ಕ ಬಸ್ಸುಗಳು ಎಷ್ಟು ಇವೆ ಸ್ವಾಮಿ ?

Sri D. DEVARAJ URS.– I am unable to give that answer because that is not a direct question arising out of this question. If a separate question is put, I will get the information.

Sri G. V. GOWDA.—What is the quantum of commission paid to the dealers for the purchase of 200 TMB Chassis?

Sri D. DRVARAJ URS.—We do not pay any commission.

Sri J. P. SARVESH.—May I know why in spite of public demand, the Gulbarga Division is not able to put in more buses on the routes there?

Sri D. DEVARAJ URS.—In Gulbarga Division, there are 111 schedule and have a fleet of 144. On each schedule, we have put one vehicle. As against the schedules of 111, we have 144 vehicles.

ಶ್ರೀ ಬಿ. ಬೈರಪ್ಪಾಜಿ –ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿರುವ ಪ್ರಕಾರ ಹೆಚ್ಚಿಗೆ ಬಸ್ಸುಗಳು ಇವೆಯೆಂದು ಹೇಳಿದ್ದಾರೆ. ಅನೇಕ ದೃಷ್ಟಿಯಿಂದ ತುಮಕೂರು ಜಿಲ್ಲೆಯಲ್ಲಿ ಕೆಲವು ಲೈನುಗಳನ್ನು ಕೇಳುತ್ತಿದ್ದರೂ ಹೆಚ್ಚಿಗೆ ಬಸ್ಸುಗಳಿದ್ದರೂ ಅಲ್ಲಿ ಇನ್ನೂ ಬಸ್ಸುಗಳನ್ನು ಓಡಿಸುವುದಕ್ಕೆ ಪ್ರಯತ್ನ ಪಡದೇ ಇರುವುದಕ್ಕೆ ಕಾರಣವೇನು?

ಶ್ರೀ ಡಿ. ದೇವರಾಜ ಅರಸ್.—ಅದಕ್ಕೆ ಮುಖ್ಯ ಕಾರಣಗಳು ಕೆಲವು ಇವೆ. ತುಮಕೂರು ಜಿಲ್ಲೆಯಲ್ಲಿ ನಾವು ರಾಷ್ಟ್ರೀಕರಣ ಇನ್ನೂ ಮಾಡಿಲ್ಲ. ಯಾವುದೋ ಒಂದು ಕಡೆ ಮಾನ್ಯ ಸದಸ್ಯರ ಸಲಹೆ ಪ್ರಕಾರ ಹಾಗೂ ಸಾರ್ವಜನಿಕರ ಅಭಿಪ್ರಾಯ ಪ್ರಕಾರ ಬಸ್ ಹೋಗಬೇಕು ಎಂಬುದಾಗಿ ಹೇಳಿದಾಗ ಹೊಸದಾಗಿ ಆ ರೂಟನ್ನಲ್ಲಿ ರಾಷ್ಟ್ರೀಕರಣ ಮಾಡುವುದು ಒಂದು. ಅಲ್ಲದೆ ಈಗಾಗಲೇ ರಾಷ್ಟ್ರೀಕರಣ ಮಾಡಿರುವ ಕಡೆಗಳಲ್ಲಿ ಖಾಸಗೀ ಮಾಲೀಕರಿಗೆ ನಂಬಿಕೆ ದೊರೆಯುವ ಹಾಗೆ ಕೆಲಸ ಮಾಡುತ್ತಿಲ್ಲ. ಆದಕಾರಣ ಅಂತಹ ಕಡೆಗಳಲ್ಲಿ ನಮ್ಮ ಬಸ್ಸುಗಳನ್ನು ಇನ್ನೂ ಹಾಕಿಲ್ಲ. ಇನ್ನು ನಾವು ರಾಷ್ಟ್ರೀಕರಣ ಮಾಡಿರುವ ಕಡೆ ಎಷ್ಟು ಬಸ್ಸುಗಳನ್ನು ನಾವು ಹಾಕಬೇಕೋ ಅಷ್ಟು ಬಸ್ಸುಗಳನ್ನು ಹಾಕುವುದು ನಮ್ಮ ಜವಾಬ್ದಾರಿ. ಅಲ್ಲದೆ ಪ್ರತಿ ವರ್ಷವೂ ನಮಗೆ ಬೇಕಾದಷ್ಟು ಛಾಸಗಳು ಸಿಕ್ಕುತ್ತಾ ಇಲ್ಲ.

Sri SANJEEVANATH AIKALA.—Is not the Government required to get their requirements of Chassis through the State Trading Corporation and not through private dealers?

Sri D. DEVARAJ URS.—It is not correct. The Director General of Supplies and Disposals fixes the prices for the entire country and there is no higgle-haggle over the prices.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.— ಮಾನ್ಯ ಮಂತ್ರಿಗಳು ಹೊಸ ಲೈನುಗಳನ್ನು ಹಾಕುವುದಕ್ಕೆ ತೊಂದರೆ ಇದೆಯೆಂದು ಹೇಳಿದರು. ರಾಷ್ಟ್ರೀಕರಣ ಮಾಡಿರತಕ್ಕಂಥ ಲೈನುಗಳಲ್ಲಿ ಓಡುತ್ತಿದ್ದಂಥ 7 ಬಸ್ಸುಗಳ ಪೈಕಿ ಆದಾಯ ಕಮ್ಮಿ ಇದೆಯೆಂದು 2-3 ಬಸ್ಸುಗಳನ್ನು ನಿಲ್ಲಿಸಿರುವುದರಿಂದ ಆ ರೂಟನ್ನಲ್ಲಿ ಬೇರೆ ಬಸ್ಸುಗಳು ಓಡಾಡುತ್ತಿವೆಯೆಂಬುದು ಸರ್ಕಾರಕ್ಕೆ ಗೊತ್ತಿದೆಯೇ?

ಶ್ರೀ ಡಿ. ದೇವರಾಜ ಅರಸ್.—ಅದು ಯಾವ ರೂಟ್ ಎಂಬುದನ್ನು ಖಚಿತವಾಗಿ ಹೇಳಿದರೆ ಉತ್ತರ ಕೊಡಬಲ್ಲೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ತಿಪಟೂರು—ಚನ್ನರಾಯಪಟ್ಟಣ ರೂಟ್‌ನಲ್ಲಿ 7 ಬಸ್ಸುಗಳು ಓಡುತ್ತಿದ್ದು ಈಗ ಆದಾಯ ಕಡಿಮೆ ಎಂದು ಎರಡು ಬಸ್ಸುಗಳನ್ನು ನಿಲ್ಲಿಸಿ ಬಂದ ದುಡ್ಡನ್ನೆಲ್ಲಾ ಹಂಚಿಕೊಂಡು ತಿಂದುಬಿಟ್ಟಿರುವುದು ಸರ್ಕಾರಕ್ಕೆ ಗೊತ್ತಿದೆಯೇ?

ಶ್ರೀ ಡಿ. ದೇವರಾಜ್ ಅರಸ್.—ಮಾನ್ಯ ಸದಸ್ಯರ ಇನ್‌ಫರನ್ಸ್ ಸರಿಯಾಗಿಲ್ಲ. ಟೋಟಲ್ಲಾಗಿ ಡಿನೈ ಮಾಡಬೇಕಾಗುತ್ತದೆ. ಅವರು ಹೇಳಿದ ಲೈನನ್ನು ಸಂಪೂರ್ಣವಾಗಿ ಆಕ್ಯುಪೈ ಮಾಡಲಿಲ್ಲ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—(ಸಿ)ಗೆ ಉತ್ತರದಲ್ಲಿ the purchases were made at the rates fixed by the D. G. S. & D. Government of India ಎಂದು ಹೇಳಿದೆ. (ಡಿ) ಗೆ ಉತ್ತರದಲ್ಲಿ to patronize all recognised dealears in the State ಎಂದು ಹೇಳಿದ್ದೀರಿ. ಅಂದಮೇಲೆ ಯಾರ್ಯಾರಿಗೆ ಮತ್ತು ಯಾವ್ಯಾವ ಫರ್ಮ್‌ಗಳಿಗೆ ಟೆಂಡರುಗಳನ್ನು ಕೊಟ್ಟಿದ್ದೀರಿ?

ಶ್ರೀ ಡಿ. ದೇವರಾಜ್ ಅರಸ್.—ಆ ಟೈಂನಲ್ಲಿ ಬೇರೆ ಯಾರಿಗೂ ಕೊಟ್ಟಿಲ್ಲ, ಅವರೊಬ್ಬರಿಗೆ ಮಾತ್ರ ಕೊಟ್ಟಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಮಂತ್ರಿಗಳಿಗೆ ಬೇಕಾದಷ್ಟು ರೆಪ್ರಸೆಂಟೇಷನ್‌ಗಳನ್ನು ಕೊಟ್ಟು, ಎರಡು-ಮೂರು ಸಾರಿ ಟೆಲಿಗ್ರಾಂಗಳನ್ನು ಮಾಡಿದರೂ ತಿಪಟೂರು-ಚನ್ನರಾಯಪಟ್ಟಣ ರೂಟಿನಲ್ಲಿ ಆದಾಯ ಕಡಿಮೆ ಎಂದು ಓಡುತ್ತಾ ಇರತಕ್ಕ ಬಸ್ಸುಗಳನ್ನು ಕಡಿಮೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಡಿ. ದೇವರಾಜ ಅರಸ್.—ಆ ವಿಷಯ ಸರ್ಕಾರಕ್ಕೆ ಗೊತ್ತಿಲ್ಲ.

ಶ್ರೀ ಟಿ. ಜಿ. ನತ್ಯನಾರಾಯಣ.—ಬಳ್ಳಾರಿ ಜಿಲ್ಲೆಯ ಬಸ್ಸುಗಳ ರಾಷ್ಟ್ರೀಕರಣ ವಿಚಾರ ಇನ್ನೂ ಹೈಕೋರ್ಟಿನಲ್ಲಿ ಪೆಂಡಿಂಗ್ ಇರುವ ದೆಸೆಯಿಂದ ಅದರ ವಿಚಾರವಾಗಿ ಏನಾದರೂ ತೀರ್ಮಾನವಾದರೆ ಕೂಡಲೆ ಅಲ್ಲಿ ಬಸ್ಸುಗಳನ್ನು ಹಾಕುವ ಅವಕಾಶವನ್ನು ಕಲ್ಪಿಸಿಕೊಡುತ್ತೀರಾ ?

Sri D. DEVARAJ URS.—That does not arise out of this question.

Mr. SPEAKER.—Now, passed-over Question No: 202 of Sri R. Kenchappa.

Reservation of 18 Per cent of the posts for Scheduled Castes and Scheduled Tribes, both at the stage of Recruitment and Promotion.

*Q.—202. Sri R. KENCHAPPA (Pavagada).—

Will the Goverment be pleased to state :—

(*a*) whether it is not a fact that the Supreme Court has held that 18 per cent of the posts should be reserved for Scheduled Castes and Scheduled Tribes both at the stage of recruitment and promotion;

(*b*) if so, whether 18 per cent of the posts in all the Cadres have been filled up by appointing Scheduled Castes and Scheduled Tribes candidates in the light of the Supreme Courts decision as stated above;

(*c*) whether they would take action to conduct a survey regarding the number of candidates of Scheduled Castes and Scheduled Tribes who have passed S. S. L. C. technical courses and degree examinations and who are still unemployed with a view to provide employement to them in order to meet the shortage ?

A.— Sri S. NIJALINGAPPA (Chief Minister).—

(*a*) No.

(*b*) Does not arise in view of (*a*) above.

(*c*) It is not necessary or practicable to conduct such a State-wide survey. But care will be taken to review the situation.

ಶ್ರೀ ಆರ್. ಕೆಂಚಪ್ಪ.—ನನ್ನ ಪ್ರಶ್ನೆಯ (ಅ) ಭಾಗಕ್ಕೆ ನಿಜವಲ್ಲವೆಂದು ಉತ್ತರ ಕೊಟ್ಟಿದ್ದಾರೆ. ರಾಜ್ಯಾಂಗದಲ್ಲಯೇ ಶೇ. 18 ರಷ್ಟು ಹುದ್ದೆಗಳನ್ನು ನೇಮಕ ಮಾಡುವಹಾಗೂ ಬಡ್ತಿ ಕೊಡುವ ಕಾಲದಲ್ಲಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಆದಿಯ ಜಾತಿಗಳವರಿಗೆ ರಿಜರ್ವ್‌ಮಾಡಬೇಕೆಂದು ಇರುವಾಗ ಆ ವಿಷಯದಲ್ಲಿ ಸುಪ್ರೀಂ ಕೋರ್ಟಿನ ತೀರ್ಮಾನವಾಗಿದ್ದರೂ ಏತಕ್ಕೊಸ್ಕರ ಆ ಆಜ್ಞೆಯನ್ನು ಸರ್ಕಾರದವರು ಜಾರಿಗೆ ತರಬಾರದು ? ಅದು ಸರ್ಕಾರದ ಕರ್ತವ್ಯವಲ್ಲವೇ.

ಶ್ರೀ ಎಸ್. ನಿಜಲಿಂಗಪ್ಪ.—ಪ್ರಶ್ನೆ ಕೇಳಿರತಕ್ಕ ಕ್ರಮ ಸರಿಯಾಗಿಲ್ಲ. ಪ್ರೊಮೋಷ್ ಮತ್ತು ರೆಕ್ರೂಟ್‌ಮೆಂಟ್ ವಿಷಯವಾಗಿ ಕೇಳಿದ್ದಕ್ಕೆ ಇಲ್ಲವೆಂದು ಉತ್ತರದಲ್ಲಿ ಹೇಳಿದೆ. ರೆಕ್ರೂಟ್‌ಮೆಂಟಿನ ಬಗ್ಗೆ ಶೇ. 18 ರಷ್ಟು ಮಾಡಬೇಕೆಂದೂ ಪ್ರೊಮೋಷನ್‌ಗೆ ಆ ರೀತಿ ಕೊಡುವುದಕ್ಕೆ ಸಾಧ್ಯ